

ನಲವತ್ತು ವರ್ಷಗಳ ಹಿಂದೆ ಪ್ರಾಥಮಿಕ ಶಿಕ್ಷಣದಲ್ಲಿ ಸೆಣಬಿನ ಬೆಳೆ ಮತ್ತು ಉಪಯೋಗಗಳ ಕುರಿತು ಓದುತ್ತಿದ್ದಾಗ, 'ಅರೆ, ಇದನ್ನು ನಮ್ಮ ದಕ್ಷಿಣ ಭಾರತದಲ್ಲೇಕೆ ಬೆಳೆಯುವುದಿಲ್ಲ?' ಎಂದು ಶಿಕ್ಷಕರನ್ನು ಕೇಳುತ್ತಿದ್ದೆವು. ಅಂದಿನ ಕಾಲದ ಮಾಹಿತಿಯನ್ನಾಧರಿಸಿ ಉತ್ತರಿಸುತ್ತಿದ್ದ ಶಿಕ್ಷಕರು, 'ಅದು ಉತ್ತರ ಅಥವಾ ಪೂರ್ವ ರಾಜ್ಯಗಳ ಬೆಳೆ ಇರಬಹುದು, ಅದನ್ನು ಬೆಳೆಯಲು ಬೇಕಾದ ಸರಿಯಾದ ಹವಾಗುಣ ಅಲ್ಲಿದೆ' ಎನ್ನುತ್ತಿದ್ದರು.

ಹೌದು. ಅದು ಇಂದಿಗೂ ನಿಜ. ದೇಶದ ಅತ್ಯಂತ ಹೆಚ್ಚು ಸೆಣಬು ಬೆಳೆಯುವ ರಾಜ್ಯವೆಂದರೆ ಪಶ್ಚಿಮ ಬಂಗಾಳ ಎಂದು ಅಂದು ಮಾಡಿದ್ದ ಕಂಠಪಾಠ ಈಗಲೂ ನೆನಪಿದೆ; ಆ ಹಿರಿಮೆ ಈಗಲೂ ಬದಲಾಗಿಲ್ಲ. ಆದರೀಗ ಅದರ ಚಿತ್ರಣ ಸ್ವಲ್ಪ ಬದಲಾಗಿದೆ. ಪಶ್ಚಿಮ ಬಂಗಾಳ ರಾಜ್ಯದ ವಾಣಿಜ್ಯ ಬೆಳೆ ಎಂದೇ ಖ್ಯಾತಿಯುಳ್ಳ ಸೆಣಬಿನ ಬೆಳೆಗೆ ಗ್ರಹಣ ಹಿಡಿದಿದೆ. ಇತ್ತೀಚಿನ ಕೃಷಿ ಮಂತ್ರಾಲಯದ ವರದಿಯ ಪ್ರಕಾರ ದೇಶದ ಒಟ್ಟು ಸೆಣಬಿನ ಬೆಳೆಯ ಪ್ರಮಾಣ ಕಳೆದ ದಶಕದಿಂದ ಇಲ್ಲಿಯವರೆಗೆ ಶೇ. 13ರಷ್ಟು ಕುಸಿದಿದೆ. ಪಶ್ಚಿಮ ಬಂಗಾಳದಲ್ಲಿ ಒಂದು ಲಕ್ಷ ಹೆಕ್ಟೇರ್‌ನಷ್ಟು ಪ್ರದೇಶದಿಂದ ಸೆಣಬಿನ ಬೆಳೆ ಕಣ್ಮರೆಯಾಗಿದೆ. ಸೆಣಬು ಉತ್ಪನ್ನ ತಯಾರಿಸುವ ದೇಶದ 93 ಮಿಲ್‌ಗಳ ಪೈಕಿ 70 ಪಶ್ಚಿಮ ಬಂಗಾಳದಲ್ಲೇ ಇವೆ. ಅಸ್ಸಾಂ, ಬಿಹಾರ, ಒಡಿಶಾ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲೂ ಸೆಣಬಿನ ಕೃಷಿ ಇದೆಯಾದರೂ, ಆ ಪ್ರಮಾಣ ಪಶ್ಚಿಮ ಬಂಗಾಳದ ಎದುರು ಅತ್ಯಂತ ಕಡಿಮೆಯೆ.

## ಕುಸಿದ ಬೆಲೆ, ಏರಿದ ಪೈಪೋಟಿ

ಸೆಣಬಿನ ಬೆಳೆ ತುಂಬಾ ಲಾಭದಾಯಕ. ತರಕಾರಿಯಂತೆ ಮಾರಾಟವಾಗುವ ಎಲೆಗಳಿಗೆ ಭಾರೀ ಬೇಡಿಕೆ ಇದೆ. ಕಟಾವಿಗೂ ಮುನ್ನ ಗಿಡದ ಕಾಂಡದ ತಿರುಳಿನಿಂದ ಕಾಗದ ತಯಾರಿಸಲಾಗುತ್ತದೆ. ಹೊರಭಾಗದ ಪದರದಿಂದ

